ಹಾದರಗುಟ್ಟಿದವನೇ...' ಮುಂತಾಗಿ ಗಂಟಲನ್ನು ಶಕ್ತಿ ಮೀರಿ ಉಪಯೋಗಿಸಿ ಚೀರಾಡಲಿಕ್ಕೆ ತೊಡಗಿದ್ದ. ಅವನ ಕಿರುಚಾಟದಿಂದ ಅಕ್ಕಪಕ್ಕದ ಕೆಲವರು ನಿಧಾನವಾಗಿ, ಕೆಲವರು ತುರ್ತಾಗಿ ಅವರ ಬಳಿ ಸೇರಿದರು.

ಬೆಳಿಗ್ಗೆ ನಿಂಗಣ್ಣನಿಗೆ ಪಂಚಾಯ್ತಿ ಸೇರಿಸಿ ದಂಡ ಹಾಕುತ್ತಾರೆಂದು ಎಲ್ಲರಿಗೂ ತಿಳಿದಿತ್ತು. ಆದರೆ ಪಂಚಾಯ್ತಿ ಸಂಜೆಗೆ ಹೋಗುವಷ್ಟರ ಮಟ್ಟಿಗೆ ನಿಂಗಣ್ಣ ರಾಜಕೀಯ ಮಾಡಿದ. ನಿಂಗಣ್ಣನ ಒಂದು ಕಣ್ಣು ಸಂಪೂರ್ಣ ಕಾಣಿಸದಂತೆ ಊದಿಕೊಂಡಿದ್ದರಿಂದ ಎಲ್ಲರೂ ಗ್ಯಾನಿ ನಿಂಗಣ್ಣನಿಗೆ ಕಣಗೆಯಿಂದ ಹೊಡೆದಿದ್ದಾರೆ ಎಂದು ಮಾತಾಡಿಕೊಳ್ಳಲು ತೊಡಗಿದ್ದರು. ಅದಕ್ಕೆ ನಿಂಗಣ್ಣನ ಕಡೆಯವರು ಛೇ! ಎಲ್ಲಾದರೂ ಉಂಟೆ. ಗ್ಯಾನಿ ಕಣಗೆ ಎತ್ತುವಷ್ಟಾದರೂ ಶಕ್ತಿ ಎಲ್ಲಿಂದ ಬಂದೀತು ಎಂದು ಛೇಡಿಸುತ್ತಿದ್ದರು. ಈ ಘಟನೆಯಿಂದ ಗ್ಯಾನಿಯಂತೂ ಸಂಪೂರ್ಣ ಸಿಟ್ಟಿನಿಂದ ಕುದಿಯತೊಡಗಿದ್ದ. ಆದರೆ ಗುಲಾಬಿಗೆ ಇದು ಯೋಚಿಸಿದಷ್ಟು ಗೋಜಲಾಗಿ ಕೊನೆಗೆ ಗ್ಯಾನಿಯ ಬಳಿ 'ಜ್ಞಾನೋಬ, ಅವನು ನಂಗೇನು ಮಾಡೇ ಇಲ್ಲ. ಮುಟ್ಟಿಯೂ ಇಲ್ಲ. ಇದನ್ನ ಹೇಗೆ ಪಂಚಾಯ್ತಿಯಲ್ಲಿ ಹೇಳೋದು? ಪಂಚಾಯ್ತಿ ಬೇಡ ಅಂತ ಹೇಳ್ಬಿಡು...' ಎಂದು ಹೇಳಿಕೊಂಡಳು. ಇದನ್ನು ಕೇಳಿದ ಗ್ಯಾನಿ 'ಮುಟ್ಟಿಲ್ಲವಂತೆ ಮುಚ್ಚುಬಾಯಿ ಮಾದರಚೋದ್...' ಮುಂತಾಗಿ ಬಯ್ದು ಹೊರಗೆ ಹೊರಟ. ಗುಲಾಬಿ ಎಷ್ಟು ಯೋಚಿಸಿದರೂ ನಿಂಗಣ್ಣನದು ತಪ್ಪು ಕಾಣಲಿಲ್ಲ. ತಾನೇ ಹೆದರಿ ಚೀರಿಕೊಡದ್ದು ಅಂತ ತುಳಜಕ್ಕ– ತುಕರಾಮಣ್ಣರ ಬಳಿ ಹೇಳಿಕೊಂಡು ಅತ್ತಳು. ಕೊನೆಗೆ ಗ್ಯಾನಿಯ ಬಳಿ ಮತ್ತೊಮ್ಮೆ ಹೇಳಿಕೊಂಡಳು. ಅವನು ಕೇಳದೆ ಇದ್ದಾಗ 'ನಾನು ನನ್ನ ತೌರುಮನೆಗೆ ಹೋಗ್ತೀನಿ. ಹೋಗಿರದ ಮಾನಕ್ಕೆ ಪಂಚಾಯ್ತಿ ಸೇರಿಸಿ ನನ್ನ ಮಾನ ತೆಗೀಬೇಕು ಅಂತಿದೀರಾ...' ಮುಂತಾಗಿ ಹೇಳಿ ಮಧ್ಯಾಹ್ನವೇ ಕುಂಬಳೂರ ಕಡೆ ಬಸ್ಸು ಹತ್ತಿ ಹೋಗಿಬಿಟ್ಟಳು.

ಗುಲಾಬಿ ಹೋದ ಹದಿನೈದು ದಿನ, ಗ್ಯಾನಿ ಬಟ್ಟೆ ಹೊಲಿಯಲು ಹೋಗಲಿಲ್ಲ. ಸುಮ್ಮನೆ ಕಟ್ಟೆ ಮೇಲೆ ಕೂತು ಯೋಚಿಸಲು ತೊಡಗಿದ. ತನ್ನ ಗೆಳೆಯ ಕೆಂಚನೊಟ್ಟಿಗೆ ಆಗಾಗ ಹೊನ್ನಾಳಿ, ತರನಳ್ಳಿ ಅಂತ ಅಲೆದ. ಹೊಲೆಯಲು ತೆಗೆದುಕೊಂಡ ಬಟ್ಟೆಗಳನ್ನು ನನ್ನಿಂದ ಹೊಲೆಯಲು ಆಗುವುದಿಲ್ಲವೆಂದು ತುಕರಾಮಣ್ಣ ಬಟ್ಟೆ ಹಾಕಲು ಮತ್ತು ಬಿಡಿಸಿಕೊಳ್ಳಲು ಬಂದವರೆದುರು ಆಡಿಕೊಳ್ಳುತ್ತಿದ್ದ. ಕೊನೆಗೊಂದು ದಿನ ಗ್ಯಾನಿ ಕುಂಬಳೂರ ಬಸ್ಸು ಹತ್ತಿ ಮಾವನ ಮನೆ ತಲುಪಿದ. ಪ್ರಥಮಬಾರಿಗೆ ಠಾಕುಠೀಕಲ್ಲದ ಸಾಮಾನ್ಯ ಪೈಜಾಮ, ಅಂಗಿ, ಚಪ್ಪಲಿಗಳಲ್ಲಿ ಗ್ಯಾನಿ ಹೆಂಡತಿ ಊರಿಗೆ ಬಂದಿದ್ದ. ಅವನ ಮಾವಂದಿರುಗಳು ಗ್ಯಾನಿಯನ್ನು ನೋಡಿ ಕೆಂಡಕೆಂಡವಾದರು. ಅಯೋಗ್ಯ, ನಾಲಾಯಕ್ಕು ಎನ್ನುವ ಪದಗಳು ಪದೇ ಪದೇ ಬಂದವು. ನಮ್ಮ ಮಗಳು ನಮಗೇನು ಭಾರವಲ್ಲ ನಿನ್ನಂಥವನ ಬಳಿ ಕಳಿಸಲು ನಮಗಿಷ್ಟವಿಲ್ಲ ಎಂದರು. ಇವರ ಮಾತುಗಳನ್ನೆಲ್ಲಾ ಸಹಿಸುತ್ತಾ ಗುಲಾಬಿಗಾಗಿ ಹುಡುಕಿದ. ಆದರವಳು ಹರಿಹರದ ಅಣ್ಣನ ಮನೆಗೆ ಹೋಗಿದ್ದಳು. ಕೊನೆಯ ಮಾತಾಗಿ ಗ್ಯಾನಿಯ ಮಾವ ಮಗಳನ್ನು ಕಳಿಸಲು ಆಗುವುದಿಲ್ಲವೆಂದು ತೀರ್ಮಾನ ಹೇಳಿದ ಮೇಲೆ ಗ್ಯಾನಿ 'ಯಾರು ನಾಲಾಯಕ್ಕು? ಸ್ವಲ್ಪ ಹಲ್ಲಿಡಿದು ಮಾತಾಡ್ರಿ. ಮೂರು ತಿಂಗಳು ಆಗಿತ್ತು ನಿಮ್ಮ ಮಗಳಿಗೆ ಅಂತ ಗೊತ್ತಿದ್ರೂ, ನಿಮ್ಮ ಮಗಳ್ನ ಮನೆಗೆ ಸೇರಿಸಿಕೊಂಡೆನಲ್ಲ ಅದು ಅಯೋಗ್ಯತೆನ? ಥೂ ನಿಮ್ಮ. ನಿಮಗೂ ನಿಮ್ಮ ಮಗಳಿಗೂ ಬೆಂಕಿ ಹಚ್ಚಿದ್ರು...' ಎಂದು ಅವರ ಮಾವನಿಗೆ ಎಲ್ಲರೆದುರು ಉಗಿದು ಊರಕಡೆ ಬಸ್ಸು ಹತ್ತಿದ.

ಆದರೆ ಊರಲ್ಲಿ ಮತ್ತೆ ಗುಲಾಬಿಯ ನೆನಪು ಕಾಡಲಿಕ್ಕೆ ತೊಡಗಿತ್ತು. ಅವಳು ಊರಿನಲ್ಲಿ ಇದ್ದಷ್ಟು ದಿನವೂ ಗ್ಯಾನಿಯ ಯೋಗಕ್ಷೇಮ ನೋಡಿಕೊಳ್ಳುತ್ತಾ, ರುಚಿ ರುಚಿ ಅಡಿಗೆ ಮಾಡಿತ್ತಾ